KACM710007942025

**1** <u>ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ.</u>

<u>ಉಪಸ್ಥಿತರು</u>

ಶ್ರೀಮತಿ ಉರ್ಮಿಳ.ವಿ., ಬಿ.ಎ.ಎಲ್., ಎಲ್‌ಎಲ್‌ಬಿ.,
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.

ದಿನಾಂಕ ಃ **4** ನೇ ಆಗಸ್ಟ್ **2026**

<u>ಕ್ರಿಮಿನಲ್ ಮೊಕದ್ದಮೆ ಸಂಖ್ಯೆ **446/2025**</u>

ಫಿರ್ಯಾದಿ ಃ ರಾಜ್ಯದ ಪರವಾಗಿ ಲಕ್ಕವಳ್ಳಿ ಪೊಲೀಸರು

**(**ಪ್ರತಿನಿಧಿಸುವವರುಃ ಸಹಾಯಕ ಸರ್ಕಾರಿ ಅಭಿಯೋಜಕರು**)**

**-**ವಿರುದ್ಧ**-**

<u>ಆರೋಪಿ/ತರುಃ</u>

1) ಗೋವಿಂದಪ್ಪ ಬಿನ್ ಗಿರಿಗೌಡ, 65 ವರ್ಷ, ವ್ಯವಸಾಯಗಾರರು,
2) ಜಯಲಕ್ಷ್ಮಿ ಕೋಂ ಗೋವಿಂದಪ್ಪ, 48 ವರ್ಷ, ಕೂಲಿಕೆಲಸ,
3) ಕುಮಾರ ಬಿನ್ ಗೋವಿಂದಪ್ಪ, 29 ವರ್ಷ, ಚಾಲಕ ವೃತ್ತಿ,

ಎಲ್ಲರೂ ವಾಸಃ ಹರುವನಹಳ್ಳಿ ಗ್ರಾಮ, ಲಕ್ಕವಳ್ಳಿ ಹೋಬಳಿ, ತರೀಕೆರೆ ತಾಲ್ಲೂಕು.

(ಪ್ರತಿನಿಧಿಸುವವರುಃ ಶ್ರೀ ಹೆಚ್.ಸಿ.ಸತೀಶ್ ಕುಮಾರ್, ನ್ಯಾಯವಾದಿಗಳು)

| | | |
|---|---|---|
| 1 | ಅಪರಾಧ ನಡೆದ ದಿನಾಂಕ | 24.11.2024 |
| 2 | ಅಪರಾಧ ವರದಿ ಮಾಡಿದ ದಿನಾಂಕ | 24.11.2024 |
| 3 | ಆರೋಪಿತರನ್ನು ಬಂಧಿಸಿದ ದಿನಾಂಕ | - |
| 4 | ಪಿರ್ಯಾದಿಯ ಹೆಸರು | ಗಿರೀಶ್ |

| | | |
|---|---|---|
| 5 | ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ | 27.07.2026 |
| 6 | ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ | 27.07.2026 |
| 7 | ಆರೋಪಿಸಲಾದ ಅಪರಾಧಗಳು | ಭಾ.ನ್ಯಾ.ಸಂ.ಕಲಂ 118(1), 351(2) ಸಹವಾಚಕ ಕಲಂ 3(5) |
| 8 | ನ್ಯಾಯಾಧೀಶರ ಅಭಿಪ್ರಾಯ | ಆರೋಪಿತರು ನಿರಪರಾಧಿಗಳು |

***

ತೀರ್ಪು

ಪೊಲೀಸ್ ಉಪನಿರೀಕ್ಷಕರು, ಲಕ್ಕವಳ್ಳಿ ಪೊಲೀಸ್ ಠಾಣೆ ಇವರು ಆರೋಪಿತರ ವಿರುದ್ಧ ಭಾರತೀಯ ನ್ಯಾಯ ಸಂಹಿತ ಕಲಂ 118(1) ಮತ್ತು 351(2) ಸಹವಾಚಕ ಕಲಂ 3(5) ರಡಿಯಲ್ಲಿನ ಶಿಕ್ಷಾರ್ಹ ಅಪರಾಧಕ್ಕಾಗಿ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ.

2. ಈ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆ:-

ದಿನಾಂಕ 24.11.2024 ರಂದು ಮಧ್ಯಾಹ್ನ 12.00 ಗಂಟೆ ಸಮಯದಲ್ಲಿ ಲಕ್ಕವಳ್ಳಿ ಪೊಲೀಸ್ ಠಾಣಾ ಸರಹದ್ದಿನ, ಹರುವನಹಳ್ಳಿ ಗ್ರಾಮದ ಸರ್ವೆ ನಂ.3 ರ ಬಗರ್ ಹುಕುಂ ಜಾಗದಲ್ಲಿ ಚಾಸಾ-1 ಗಿರೀಶರವರ ಅಡಿಕೆ ತೋಟದಲ್ಲಿ ಆರೋಪಿತರು ಸಮಾನ ಉದ್ದೇಶದಿಂದ ಮಣ್ಣು ತೆಗೆಯುತ್ತಿದ್ದಾಗ, ಚಾಸಾ-1 ರವರು ಯಾಕೆ ನಮ್ಮ ತೋಟದಲ್ಲಿ ಮಣ್ಣು ತೆಗೆಯುತ್ತಿದ್ದಿರಿ ಎಂದು ಆರೋಪಿತರಿಗೆ ಕೇಳಿದ್ದಕ್ಕೆ 2 ಮತ್ತು 3 ನೇ ಆರೋಪಿತರು ಚಾಸಾ-1 ರವರನ್ನು ಹಿಡಿದುಕೊಂಡಿದ್ದು 1 ನೇ ಆರೋಪಿಯು ಅಲ್ಲೇ ಬಿದ್ದಿದ್ದ ಸುಮಾರು 2 ವರೆ ಅಡಿ ಉದ್ದದ ಸಾಗುವಾನಿ ಮರದ ದೊಣ್ಣೆಯಿಂದ ಚಾಸಾ-1 ರವರ ತಲೆಗೆ ಮತ್ತು ಕೈಬೆರಳುಗಳಿಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿ, ನಂತರ ಆರೋಪಿತರೆಲ್ಲರೂ ಸೇರಿ ಚಾಸಾ-1 ರವರಿಗೆ ನಿನ್ನನ್ನು ಜೀವ ಸಹಿತ

Visit **ecourts.gov.in** for updates or download mobile app “**eCourts Services**” from Android or iOS

ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತಾರೆ. ಆದ್ದರಿಂದ ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

3. ಪ್ರಸ್ತುತ ಪ್ರಕರಣದಲ್ಲಿ ತನಿಖಾಧಿಕಾರಿಯು ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ ನಂತರ ಸಂಜ್ಞೆಯನ್ನು ತೆಗೆದುಕೊಳ್ಳಲಾಯಿತು. ಆರೋಪಿತರು ನ್ಯಾಯಾಲಯದ ಸಮನ್ಸ್ ಪಡೆದು ವಕೀಲರ ಮೂಲಕ ಹಾಜರಾಗಿ ಜಾಮೀನು ಅರ್ಜಿಯನ್ನು ಸಲ್ಲಿಸಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ಆರೋಪಿತರಿಗೆ ಅಭಿಯೋಜನೆಯ ಎಲ್ಲಾ ದಸ್ತಾವೇಜುಗಳನ್ನು ಬಿ.ಎನ್.ಎಸ್.ಎಸ್. ಕಲಂ 230 ರ ಅನುಸಾರ ಒದಗಿಸಲಾಗಿರುತ್ತದೆ. ಆರೋಪಿತರ ವಿರುದ್ಧ ಭಾರತೀಯ ನ್ಯಾಯ ಸಂಹಿತ ಕಲಂ 118(1) ಮತ್ತು 351(2) ಸಹವಾಚಕ ಕಲಂ 3(5) ರಡಿಯಲ್ಲಿನ ಶಿಕ್ಷಾರ್ಹ ಅಪರಾಧಕ್ಕಾಗಿ ಅಪಾದನೆಯನ್ನು ರಚಿಸಲಾಯಿತು. ಆರೋಪಿತರು ಆರೋಪಣೆಯನ್ನು ನಿರಾಕರಿಸಿ ವಿಚಾರಣೆಯನ್ನು ಬಯಸಿರುತ್ತಾರೆ.

4. ಅಭಿಯೋಜನೆಯು ದೋಷಾರೋಪಣಾ ಪಟ್ಟಿಯಲ್ಲಿ ತೋರಿಸಿರುವ 7 ಸಾಕ್ಷಿದಾರರ ಪೈಕಿ ಚಾಸಾ-1 ರವರು ಅಸಾ-1 ರಂತೆ ಸಾಕ್ಷ್ಯ ನುಡಿದಿರುತ್ತಾರೆ. ಅಸಾ-1 ರವರು ಪಿರ್ಯಾದುದಾರರು, ಗಾಯಾಳು ಹಾಗೂ ಮಹಜರು ಸಾಕ್ಷಿದಾರರಾಗಿ ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿದ ಕಾರಣ ಉಳಿದ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸುವುದರಿಂದ ಅಭಿಯೋಜನೆಗೆ ಯಾವುದೇ ರೀತಿಯ ಸಹಾಯ ಆಗುವುದಿಲ್ಲವೆಂದು ತಿಳಿದು ಸಹಾಯಕ ಸರ್ಕಾರಿ ಅಭಿಯೋಜಕರ ಕೋರಿಕೆಯನ್ನು ತಿರಸ್ಕರಿಸಿ ಉಳಿದ ಸಾಕ್ಷಿದಾರರ ವಿಚಾರಣೆಯನ್ನು ಕೈಬಿಡಲಾಗಿರುತ್ತದೆ. ಅಭಿಯೋಜನೆಯು 4 ದಾಖಲೆಗಳನ್ನು ಹಾಜರುಪಡಿಸಿ ಅದನ್ನು ನಿಪಿ-1 ರಿಂದ 4 ಎಂದು ಗುರ್ತಿಸಿಕೊಂಡಿರುತ್ತದೆ.

5. ಅಭಿಯೋಜನೆಯು ತನ್ನ ಪರವಾಗಿ ವಿಚಾರಣೆ ಮುಗಿಸಿದ ನಂತರ ಈ ಪ್ರಕರಣದಲ್ಲಿ ಆರೋಪಿತರ ವಿರುದ್ಧ ಸಾಕ್ಷ್ಯವು ಇಲ್ಲದೇ ಇರುವುದರಿಂದ

ಬಿ.ಎನ್.ಎಸ್.ಎಸ್. ಕಲಂ 351 ರಡಿಯಲ್ಲಿನ ಆರೋಪಿತರ ಹೇಳಿಕೆಗಳನ್ನು ಕೈಬಿಡಲಾಗಿರುತ್ತದೆ.

6. ಆರೋಪಿತರು ಬಿ.ಎನ್.ಎಸ್.ಎಸ್. ಕಲಂ 481 ನ್ನು ಪಾಲನೆ ಮಾಡಿರುತ್ತಾರೆ.

7. ಆರೋಪಿತರ ಪರ ಹಾಗೂ ಅಭಿಯೋಜಕರ ಪರ ವಾದ ಪ್ರತಿವಾದಗಳನ್ನು ಆಲಿಸಲಾಯಿತು.

8. ಕಡತದಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಿದಾಗ ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರಿಗಣನೆಗೆ ಉದ್ಭವಿಸಿರುತ್ತದೆ ಃ

**1)** ದಿನಾಂಕ 24.11.2024 ರಂದು ಮಧ್ಯಾಹ್ನ 12.00 ಗಂಟೆ ಸಮಯದಲ್ಲಿ ಲಕ್ಕವಳ್ಳಿ ಪೊಲೀಸ್ ಠಾಣಾ ಸರಹದ್ದಿನ, ಹರುವನಹಳ್ಳಿ ಗ್ರಾಮದ ಸರ್ವೆ ನಂ.3 ರ ಬಗರ್ ಹುಕುಂ ಜಾಗದಲ್ಲಿ ಚಾಸಾ-1 ಗಿರೀಶರವರ ಅಡಿಕೆ ತೋಟದಲ್ಲಿ ಆರೋಪಿತರು ಸಮಾನ ಉದ್ದೇಶದಿಂದ ಮಣ್ಣು ತೆಗೆಯುತ್ತಿದ್ದಾಗ, ಚಾಸಾ-1 ರವರು ಯಾಕೆ ನಮ್ಮ ತೋಟದಲ್ಲಿ ಮಣ್ಣು ತೆಗೆಯುತ್ತಿದ್ದಿರಿ ಎಂದು ಆರೋಪಿತರಿಗೆ ಕೇಳಿದ್ದಕ್ಕೆ 2 ಮತ್ತು 3 ನೇ ಆರೋಪಿತರು ಚಾಸಾ-1 ರವರನ್ನು ಹಿಡಿದುಕೊಂಡಿದ್ದು 1 ನೇ ಆರೋಪಿಯು ಅಲ್ಲೇ ಬಿದ್ದಿದ್ದ ಸುಮಾರು 2 ವರೆ ಅಡಿ ಉದ್ದದ ಸಾಗುವಾನಿ ಮರದ ದೊಣ್ಣೆಯಿಂದ ಚಾಸಾ-1 ರವರ ತಲೆಗೆ ಮತ್ತು ಕೈಬೆರಳುಗಳಿಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು, ಆದ್ದರಿಂದ ಆರೋಪಿತರು ಭಾರತೀಯ ನ್ಯಾಯ ಸಂಹಿತ ಕಲಂ 118(1) ಸಹವಾಚಕ ಕಲಂ 3(5) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸೆಗಿರುತ್ತಾರೆ ಎಂದು ಅಭಿಯೋಜನೆಯವರು ನಿಸ್ಸಂಶಯಾತೀತವಾಗಿ ಸಾಬೀತು ಪಡಿಸಿರುತ್ತಾರೆಯೇ?

**2)** ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿತರು ಸಮಾನ ಉದ್ದೇಶದಿಂದ ಚಾಸಾ-1 ರವರಿಗೆ ನಿನ್ನನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿದ್ದು, ಆದ್ದರಿಂದ ಆರೋಪಿತರು ಭಾರತೀಯ ನ್ಯಾಯ ಸಂಹಿತ ಕಲಂ 351(2) ಸಹವಾಚಕ ಕಲಂ 3(5) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸೆಗಿರುತ್ತಾರೆ

Visit **ecourts.gov.in** for updates or download mobile app "**eCourts Services**" from Android or iOS

KACM710007942025

ಎಂದು ಅಭಿಯೋಜನೆಯವರು ನಿಸ್ಸಂಶಯಾತೀತವಾಗಿ ಸಾಬೀತು ಪಡಿಸಿರುತ್ತಾರೆಯೇ?

3) ಹಾಗಿದ್ದರೆ ಯಾವ ಆಜ್ಞೆ?

9. ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ ಃ

ಅಂಶ-1 ಃ ನಕಾರಾತ್ಮಕವಾಗಿ,

ಅಂಶ-2 ಃ ನಕಾರಾತ್ಮಕವಾಗಿ,

ಅಂಶ-3 ಃ ಅಂತಿಮ ಆದೇಶದಂತೆ,

-ಃ ಕಾ ರ ಣ ಗ ಳು ಃ-

10. ಅಂಶ-**1** ಮತ್ತು **2** ಃ ಈ ಎಲ್ಲಾ ಅಂಶಗಳು ಒಂದಕ್ಕೊಂದು ಪೂರಕವಾಗಿರುವ ಕಾರಣ ಎಲ್ಲಾ ಅಂಶಗಳನ್ನು ಒಟ್ಟಾಗಿ ಚರ್ಚೆಗೆ ತೆಗೆದುಕೊಳ್ಳಲಾಗಿದೆ. ಅಭಿಯೋಜನೆಯವರು ದಿನಾಂಕ 24.11.2024 ರಂದು ಮಧ್ಯಾಹ್ನ 12.00 ಗಂಟೆ ಸಮಯದಲ್ಲಿ ಹರುವನಹಳ್ಳಿ ಗ್ರಾಮದ ಸರ್ವೆ ನಂ.3 ರ ಬಗರ್ ಹುಕುಂ ಜಾಗದಲ್ಲಿ ಚಾಸಾ-1 ಗಿರೀಶರವರ ಅಡಿಕೆ ತೋಟದಲ್ಲಿ ಆರೋಪಿತರು ಸಮಾನ ಉದ್ದೇಶದಿಂದ ಮಣ್ಣು ತೆಗೆಯುತ್ತಿದ್ದಾಗ, ಚಾಸಾ-1 ರವರು ಯಾಕೆ ನಮ್ಮ ತೋಟದಲ್ಲಿ ಮಣ್ಣು ತೆಗೆಯುತ್ತಿದ್ದಿರಿ ಎಂದು ಆರೋಪಿತರಿಗೆ ಕೇಳಿದ್ದಕ್ಕೆ 2 ಮತ್ತು 3 ನೇ ಆರೋಪಿತರು ಚಾಸಾ-1 ರವರನ್ನು ಹಿಡಿದುಕೊಂಡಿದ್ದು 1 ನೇ ಆರೋಪಿಯು ಅಲ್ಲೇ ಬಿದ್ದಿದ್ದ ಸುಮಾರು 2 ವರೆ ಅಡಿ ಉದ್ದದ ಸಾಗುವಾನಿ ಮರದ ದೊಣ್ಣೆಯಿಂದ ಚಾಸಾ-1 ರವರ ತಲೆಗೆ ಮತ್ತು ಕೈಬೆರಳುಗಳಿಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿ, ನಂತರ ಆರೋಪಿತರೆಲ್ಲರೂ ಸೇರಿ ಚಾಸಾ-1 ರವರಿಗೆ ನಿನ್ನನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತಾರೆ ಎಂಬುದನ್ನು ಸಂಶಯಾತೀತವಾಗಿ ಸಾಬೀತು ಪಡಿಸಬೇಕಾಗಿರುತ್ತದೆ.

Visit **ecourts.gov.in** for updates or download mobile app "**eCourts Services**" from Android or iOS

11. ಚಾಸಾ-1/ಅಸಾ-1 ರವರು ಈ ಪ್ರಕರಣದ ಪಿರ್ಯಾದುದಾರರು, ಗಾಯಾಳು ಮತ್ತು ಮಹಜರು ಸಾಕ್ಷಿಯಾಗಿದ್ದು, ಸದರಿಯವರು ತಮ್ಮ ಸಾಕ್ಷ್ಯ ಮುಖ್ಯ ವಿಚಾರಣೆಯಲ್ಲಿ ಆರೋಪಿತರು ತನ್ನ ಸಂಬಂಧಿಕರು, ಆರೋಪಿತರು ತನಗೆ ಹಲ್ಲೆ ಮಾಡಿರುವುದಿಲ್ಲ, ಪ್ರಾಣ ಬೆದರಿಕೆ ಹಾಕಿರುವುದಿಲ್ಲ, ಆರೋಪಿಗಳಿಂದ ತನಗೆ ಯಾವುದೇ ರೀತಿಯ ತೊಂದರೆಯಾಗಿರುವುದಿಲ್ಲ, ತಾನು ಈ ಪ್ರಕರಣದ ಸಂಬಂಧ ಯಾವುದೇ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡಿರುವುದಿಲ್ಲ, ಈ ಪ್ರಕರಣದ ಸಂಬಂಧ ಬೇರೆ ಏನೂ ಗೊತ್ತಿರುವುದಿಲ್ಲ ಎಂದು ನುಡಿದು, ಪಿರ್ಯಾದಿನಲ್ಲಿರುವ ತನ್ನ ಸಹಿಯನ್ನು ನಿಪಿ-1(ಎ) ಎಂದು ಹಾಗೂ ಮಹಜರಿನಲ್ಲಿರುವ ತನ್ನ ಸಹಿಯನ್ನು ನಿಪಿ-2(ಎ) ಎಂದು ಹಾಗೂ ನಿಪಿ-3 ಮತ್ತು 4 ರ ಛಾಯಚಿತ್ರಗಳಲ್ಲಿ ತಮ್ಮ ಇರುವಿಕೆಯನ್ನು ಗುರುತಿಸಿರುತ್ತಾರೆ. ಅಸಾ-1 ರವರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಅನುಮತಿ ಮೇರೆಗೆ ಪಾಟೀ ಸವಾಲು ಮಾಡಿದ್ದು, ಪಾಟೀ ಸವಾಲಿನಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರ ಎಲ್ಲಾ ಸಲಹೆಗಳನ್ನು ಅಲ್ಲಗೆಳೆದು, ಆರೋಪಿತರು ತನ್ನ ಸಂಬಂಧಿಕರಾದ ಕಾರಣ ತಾನು ಮತ್ತು ಆರೋಪಿತರು ಈ ಪ್ರಕರಣವನ್ನು ರಾಜಿ ಮಾಡಿಕೊಂಡಿದ್ದೇವೆ ಎಂದು ನುಡಿದಿರುತ್ತಾರೆ. ಆ ಕಾರಣ ಅಸಾ-1 ರವರ ಸಾಕ್ಷ್ಯ ಅಭಿಯೋಜನೆಗೆ ಸಹಾಯಕವಾಗುವುದಿಲ್ಲ.

12. ಪ್ರಸ್ತುತ ಪ್ರಕರಣದಲ್ಲಿ ಅಸಾ-1 ರವರು ಪಿರ್ಯಾದುದಾರರು, ಗಾಯಾಳು ಹಾಗೂ ಮಹಜರು ಸಾಕ್ಷಿದಾರರಾಗಿ ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿದ ಕಾರಣ ಉಳಿದ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸುವುದರಿಂದ ಅಭಿಯೋಜನೆಗೆ ಯಾವುದೇ ರೀತಿಯ ಸಹಾಯ ಆಗುವುದಿಲ್ಲವೆಂದು ತಿಳಿದು ಸಹಾಯಕ ಸರ್ಕಾರಿ ಅಭಿಯೋಜಕರ ಕೋರಿಕೆಯನ್ನು ತಿರಸ್ಕರಿಸಿ ಉಳಿದ ಸಾಕ್ಷಿದಾರರ ವಿಚಾರಣೆಯನ್ನು ಕೈಬಿಡಲಾಗಿರುತ್ತದೆ.

Visit **ecourts.gov.in** for updates or download mobile app "**eCourts Services**" from Android or iOS

KACM710007942025

13. ಅಭಿಯೋಜಕರು ಈ ಪ್ರಕರಣದ ಅಸಾ-1 ರವರು ನ್ಯಾಯಾಲಯದ ಹೊರಗೆ ರಾಜಿ ಮಾಡಿಕೊಂಡಿದ್ದು, ಆರೋಪಿತರಿಗೆ ಶಿಕ್ಷೆ ತಪ್ಪಿಸುವ ಸಲುವಾಗಿ ಅಸಾ-1 ರವರು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿರುವುದರಿಂದ ಆರೋಪಿತರನ್ನು ಸೂಕ್ತ ರೀತಿಯಲ್ಲಿ ಶಿಕ್ಷಿಸಬೇಕೆಂದು ತಮ್ಮ ವಾದ ಮಂಡಿಸಿರುತ್ತಾರೆ. ಆರೋಪಿತರ ಪರ ವಕೀಲರು ತಮ್ಮ ವಾದದಲ್ಲಿ ಪ್ರಕರಣದಲ್ಲಿ ಅಸಾ-1 ರವರೇ ತಮ್ಮ ಸಾಕ್ಷ್ಯದಲ್ಲಿ ತಮಗೆ ಆರೋಪಿಗಳಿಂದ ಯಾವುದೇ ತೊಂದರೆ ಆಗಿರುವುದಿಲ್ಲವೆಂದು ನುಡಿದಿರುವ ಕಾರಣ ಆರೋಪಿತರನ್ನು ದೋಷಮುಕ್ತಗೊಳಿಸಬೇಕೆಂದು ವಾದ ಮಂಡಿಸಿರುತ್ತಾರೆ.

14. ಪ್ರಸ್ತುತ ಪ್ರಕರಣದಲ್ಲಿ ಅಭಿಯೋಜನೆಯು ಹಾಜರುಪಡಿಸಿದ ಎಲ್ಲಾ ಮೌಖಿಕ ಹಾಗೂ ದಾಖಲಾತಿ ಸಾಕ್ಷ್ಯವನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಅಸಾ-1 ರವರು ಪಿರ್ಯಾದುದಾರರು, ಗಾಯಾಳು ಹಾಗೂ ಮಹಜರು ಸಾಕ್ಷಿದಾರರಾಗಿ ಪ್ರಕರಣದಲ್ಲಿ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ ಹಾಗೂ ಆರೋಪಿತರೊಡನೆ ರಾಜಿ ಮಾಡಿಕೊಂಡಿರುವುದಾಗಿ ನುಡಿದಿರುತ್ತಾರೆ. ಆದುದರಿಂದ ಅಭಿಯೋಜನೆಯು ಆರೋಪಿತರ ವಿರುದ್ಧ ಧೂಷಿಸಲಾದ ಭಾರತೀಯ ನ್ಯಾಯ ಸಂಹಿತ ಕಲಂ 118(1) ಮತ್ತು 351(2) ಸಹವಾಚಕ ಕಲಂ 3(5) ರಡಿಯಲ್ಲಿನ ಒಳಾಂಶಗಳನ್ನು ಸಂಶಯಾತೀತವಾಗಿ ರುಜುವಾತುಪಡಿಸಲು ವಿಫಲವಾಗಿರುವುದರಿಂದ ಸಂಶಯದ ಲಾಭವನ್ನು ಆರೋಪಿತರಿಗೆ ನೀಡಿ, ಆರೋಪಿತರು ಬಿಡುಗಡೆಗೆ ಅರ್ಹರೆಂದು ಅಭಿಪ್ರಾಯಪಟ್ಟು ಅಂಶ-1 ಮತ್ತು 2 ಕ್ಕೆ ನಕಾರಾತ್ಮಕವಾಗಿ ಉತ್ತರಿಸುತ್ತಿದ್ದೇನೆ.

15. <u>ಅಂಶ - **3** ಃ</u> ಮೇಲೆ ಚರ್ಚಿಸಿದ ಎಲ್ಲಾ ಕಾರಣಗಳಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ ಃ

KACM710007942025

**-ಃ ಆದೇಶ ಃ-**

ಬಿ.ಎನ್.ಎಸ್.ಎಸ್. ಕಲಂ 271(1) ರಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿತರನ್ನು ಭಾರತೀಯ ನ್ಯಾಯ ಸಂಹಿತ ಕಲಂ 118(1) ಮತ್ತು 351(2) ಸಹವಾಚಕ ಕಲಂ 3(5) ರಡಿಯಲ್ಲಿನ ಆರೋಪಗಳಿಂದ ದೋಷಮುಕ್ತಗೊಳಿಸಲಾಗಿದೆ.

ಆರೋಪಿತರ ವೈಯುಕ್ತಿಕ ಬಾಂಡ್ ಹಾಗೂ ಜಾಮೀನು ಬಾಂಡ್ ಈ ಆದೇಶವಾದ ದಿನದಿಂದ ರದ್ದುಗೊಳಿಸಲಾಗಿದೆ.

ಆರೋಪಿತರು ಬಿ.ಎನ್.ಎಸ್.ಎಸ್. ಕಲಂ 481 ರಡಿಯಲ್ಲಿ ಸಲ್ಲಿಸಿದ ವೈಯುಕ್ತಿಕ ಬಾಂಡ್ ಹಾಗೂ ಜಾಮೀನು ಬಾಂಡ್ ಈ ಆದೇಶವಾದ ದಿನದಿಂದ ಆರು ತಿಂಗಳುವರೆಗೆ ಊರ್ಜಿತವಾಗಿರುತ್ತದೆ.

ಈ ಪ್ರಕರಣದಲ್ಲಿ ಪಿ.ಎಫ್ ಸಂಖ್ಯೆ 76/2024 - ಪಿ.ಆರ್. ಸಂಖ್ಯೆ 110/2026 ರಲ್ಲಿ ಅಮಾನತ್ತುಪಡಿಸಿಕೊಂಡಿರುವ 2 ವರೆ ಅಡಿ ಉದ್ದದ ಮರದ ದೊಣ್ಣೆ ಬೆಲೆ ಬಾಳದ ವಸ್ತುಗಳಾದ್ದರಿಂದ ಮೇಲ್ಮನವಿ ಅವಧಿ ಮುಗಿದ ನಂತರ ನಾಶಪಡಿಸುವಂತೆ ಈ ಮೂಲಕ ಕಛೇರಿಗೆ ಆದೇಶಿಸಲಾಗಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೂಲಕ ನೇರ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ, ಓದಿ ತಿದ್ದುಪಡಿ ಮಾಡಿ, ತೆರೆದ ನ್ಯಾಯಾಲಯದಲ್ಲಿ ದಿನಾಂಕ 4 ನೇ ಆಗಸ್ಟ್ 2026 ರಂದು ಘೋಷಿಸಲಾಯಿತು)

URMILA V

Digitally signed by URMILA V
Date: 2026.08.04 16:20:52 +0530

ಸಹಿ

**(**ಉರ್ಮಿಳ**.**ವಿ**.)**
**1** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ**.**ದ**.**ನ್ಯಾ**.**ದಂ**.,** ತರೀಕೆರೆ**.**

Visit **ecourts.gov.in** for updates or download mobile app "**eCourts Services**" from Android or iOS

KACM710007942025

## ಅನುಬಂಧ

ಅಭಿಯೋಜನೆಯ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ ಃ-

ಅಸಾ-1 ಃ ಗಿರೀಶ್

ಅಭಿಯೋಜನೆಯ ಪರ ಗುರುತು ಮಾಡಲ್ಪಟ್ಟ ದಾಖಲಾತಿಗಳು ಃ-

ನಿಪಿ-1 ಃ ದೂರು
ನಿಪಿ-2 ಃ ಮಹಜರು
ನಿಪಿ-3, 4 ಃ ಛಾಯಚಿತ್ರಗಳು

ಅಭಿಯೋಜನೆಯ ಪರ ಗುರುತು ಮಾಡಲ್ಪಟ್ಟ ಮುದ್ದೆಮಾಲುಗಳು ಃ-

- ಇಲ್ಲ -

ಆರೋಪಿತರ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ ಃ-

- ಇಲ್ಲ -

ಆರೋಪಿತರ ಪರ ಗುರುತು ಮಾಡಲ್ಪಟ್ಟ ದಾಖಲಾತಿಗಳು ಃ-

- ಇಲ್ಲ -

URMILA V
Digitally signed by URMILA V
Date: 2026.08.04 16:20:44 +0530

ಸಹಿ
**1** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.

Visit **ecourts.gov.in** for updates or download mobile app "**eCourts Services**" from Android or iOS